


ಒಬ್ಬ ರಾಜನಿದ್ದ. ಆತ ಮಹಾ ದೈವಭಕ್ತ ಮತ್ತು ಪ್ರಜಾಹಿತೈಷಿ. ಪ್ರಜೆಗಳು ಯಾವಾಗಲೂ ಸುಖ ಸಂತೋಷದಿಂದ ನಲಿದಾಡುತ್ತಿರಬೇಕು ಎಂದು ಪ್ರತಿದಿನ ದೇವರಲ್ಲಿ ಬೇಡುತ್ತಿದ್ದ. ದೇವರ ದಯೆಯಿಂದಲೋ ರಾಜನ ಕಾಳಜಿಯಿಂದಲೋ ಎಲ್ಲ ಪ್ರಜೆಗಳು ಸುಖವಾಗೇ ಇದ್ದರು.

ಕೆಲವು ವರ್ಷಗಳು ಗತಿಸಿದವು. ಸಿರಿವಂತರಲ್ಲಿ ಧನಮದ ಹೆಚ್ಚಿತು. ಅಧಿಕಾರಿಗಳಲ್ಲಿ ಸ್ವಾರ್ಥಭಾವನೆ ಬೆಳೆಯಿತು. ಕೆಳವರ್ಗದ ಜನರಲ್ಲಿ ಆಲಸ್ಯ, ದುರಭ್ಯಾಸಗಳು ಬೆಳೆದವು. ಅವರು ನಾನಾ ಕಷ್ಟಗಳನ್ನು ಅನುಭವಿಸ ಬೇಕಾಯಿತು. ರಾಜನಿಗೆ ಈ ವಿಷಯ ತಿಳಿಯಿತು. ವೇಷ ಬದಲಿಸಿಕೊಂಡು ಪ್ರಜೆಗಳ ಸಮಾಚಾರ ತಿಳಿದುಕೊಳ್ಳಲು ಹೊರಟ. ಬಡವರು, ಕೂಲಿಕಾರರು, ಅಂಗವಿಕಲರು ಹಸಿವೆ, ರೋಗರುಜಿನುಗಳಿಂದ ಬಳಲುತ್ತಿದ್ದರು. ರಾಜನಿಗೆ ನೋಡಲಾಗಲಿಲ್ಲ. ದುಃಖಿಸುತ್ತಲೇ ಅರಮನೆಗೆ ಮರಳಿದ. ಮೊದಲು ಅವರ ಕಷ್ಟಗಳನ್ನು ಪರಿಹರಿಸಬೇಕು ಎಂದುಕೊಂಡು ಹಣಕಾಸು ಮಂತ್ರಿಗೆ, 'ಈಗಿಂದೀಗಲೆ ಖಜಾನೆಯಿಂದ ಹಣ ಒಯ್ದು ದುಃಖಿತರಿಗೆ ಹಂಚುವ ವ್ಯವಸ್ಥೆ ಮಾಡಿರಿ' ಎಂದು ಹೇಳಿದ.

ಹಣಕಾಸು ಮಂತ್ರಿ, 'ಪ್ರಭುಗಳು ಕ್ಷಮಿಸಬೇಕು. ಖಜಾನೆಯಲ್ಲಿ ಅಷ್ಟೊಂದು ಹಣ ಇಲ್ಲ' ಎಂದ. ರಾಜನಿಗೆ ಆಶ್ಚರ್ಯ, ಕೋಪ ಎರಡೂ ಒಮ್ಮೆಲೇ ಆವರಿಸಿಕೊಂಡವು. 'ಯಾಕೆ? ಏನಾಯಿತು?' ಎಂದು ಕೇಳಿದ.

'ರಾಜ, ಬೊಕ್ಕಸಕ್ಕೆ ಬರಬೇಕಾದ ಕರ–ಕಂದಾಯಗಳು ಸರಿಯಾಗಿ ಸಂದಾಯವಾಗಿಲ್ಲ' ಮಂತ್ರಿ ಅಂಜುತ್ತ ಹೇಳಿದ.

ರಾಜನಿಗೆ ದಿಕ್ಕೇ ತೋಚದಾಯಿತು. ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟ. ತುಸು ಹೊತ್ತು ಯೋಚಿಸಿ ದೇವರಮನೆ ಹೊಕ್ಕ. ದೀರ್ಘದಂಡ ನಮಸ್ಕಾರ ಹಾಕಿದ. 'ದೇವಾ, ನಮಗೀಗ ನೀನೇ ಗತಿ. ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ. ಏನು ಮಾಡುತ್ತೀಯೋ ಮಾಡು. ಪ್ರಜೆಗಳ ದುಃಖವನ್ನು ದೂರ ಮಾಡುವವರೆಗೆ ನಾನು ಬಾಯಲ್ಲಿ ಹನಿ ನೀರನ್ನೂ ಹಾಕುವುದಿಲ್ಲ.' ಎಂದು ಮಲಗಿಬಿಟ್ಟ.

ಅನನ್ಯ ಭಕ್ತನಾದ ರಾಜನ ಅಂತರಂಗವನ್ನು ಅರಿತಿದ್ದ ದೇವರು ರಾಜನ ಕನಸಿನಲ್ಲಿ ಪ್ರತ್ಯಕ್ಷನಾಗಿ, 'ರಾಜಾ, ಚಿಂತಿಸಬೇಡ, ನಿನ್ನ ಕೋರಿಕೆಯನ್ನು ನಾನು ಈಗಾಗಲೇ ಈಡೇರಿಸಿದ್ದೇನೆ, ಹೋಗಿ ನೋಡು' ಎಂದ.

ರಾಜನಿಗೆ ಎಚ್ಚರಾಯಿತು. ಕೂಡಲೇ ಕುದುರೆ ಏರಿ ಹೊರಟ. ನಿನ್ನೆ ಇದ್ದ ಮುರುಕು ಗುಡಿಸಲು, ಮುರುಕು ಮನೆ ಎಲ್ಲಾ ಹೊಸ ಕಟ್ಟಡಗಳಾಗಿದ್ದವು. ಅವುಗಳಲ್ಲಿ ಧನ, ಧಾನ್ಯ, ವಸ್ತ್ರ– ಒಡವೆ ತುಂಬಿದ್ದವು. ದುಃಖಿತರು ಉಂಡುಟ್ಟು ಸಂತೋಷದಿಂದ ನಲಿದಾಡುತ್ತಿದ್ದರು. ಅವರನ್ನು ಕಂಡು ರಾಜನಿಗೆ ಆನಂದವಾಯಿತು. ಒಂದಿಬ್ಬರನ್ನು, 'ಇದೆಲ್ಲ ಹೇಗಾಯಿತು?' ಎಂದು ವಿಚಾರಿಸಿದ. ಅವರು, 'ನಿನ್ನ ಜೊತೆ ಮಾತಾಡೋದಕ್ಕೆ ನಮಗೆ ಸಮಯವಿಲ್ಲ ಹೋಗು.' ಅಂದುಬಿಟ್ಟರು. ರಾಜ ಒಳಗೊಳಗೇ ನಗುತ್ತ ದೇವರ ಲೀಲೆಯನ್ನು ಕೊಂಡಾಡಿದ.

ಎರಡು ದಿನ ಕಳೆದವು. ರಾಜ ಮೃಷ್ಟಾನ್ನ ಭೋಜನ ಮಾಡಿ ಆರಾಮಾಗಿ ಮಲಗಿದ್ದ. ಸಕ್ಕರೆ ನಿದ್ದೆಯಲ್ಲಿದ್ದಾಗ ಸಿಡಿಲಿನ ಭಯಂಕರ ಆರ್ಭಟಕ್ಕೆ ಬೆಚ್ಚಿಬಿದ್ದ. ಎದ್ದು ಕಿಟಕಿಯಲ್ಲಿ ಇಣುಕಿದ. ಭಾರೀ ಬಿರುಗಾಳಿ, ಗುಡುಗು, ಮಿಂಚು! ಧೋಧೋ ಎಂದು ಮಳೆ ಸುರಿಯುತ್ತಿದೆ. ನಗರದ ದೊಡ್ಡ ದೊಡ್ಡ ಭವನಗಳು ಕುಸಿದು, ಧಡ್ ಧಡ್ ಎಂದು ಬೀಳತೊಡಗಿದ್ದವು. ದೊಡ್ಡ ದೊಡ್ಡ ಮರಗಳು ಚಟ್ ಚಟ್ ಎಂದು ಮುರಿದು ಬೀಳುತ್ತಿವೆ. ಎಲ್ಲೆಲ್ಲೂ ನೀರೇ ನೀರು! ಜಲಪ್ರಳಯ! ಹಾಹಾಕಾರ! ಚೀತ್ಕಾರ! ಆಕ್ರಂದನ!

ಅನ್ಯಾಯದಿಂದ ಹಣ ಗಳಿಸಿ ಸಿರಿವಂತರಾದವರ ಮನೆಗಳೂ ಕುಸಿದಿದ್ದವು. ಕೂಲಿಕಾರರನ್ನು ಮನಬಂದಂತೆ ದುಡಿಸಿಕೊಂಡು, ಕೂಲಿ ಕೊಡದೆ ಪೀಡಿಸಿದವರ ಮನೆಗಳು, ಸಜ್ಜನರನ್ನು ವಿನಾಕಾರಣ ಪೀಡುಸುತ್ತಿದ್ದ ಸಮಾಜಘಾತುಕರ ಅಡ್ಡೆಗಳೂ, ರಾಜದ್ರೋಹಿ ಅಧಿಕಾರಿಗಳ ನಿವಾಸಗಳೂ ನೆಲಸಮವಾಗಿದ್ದವು. ದಯಾಳು ಧರ್ಮಾತ್ಮರ ಮನೆಗಳು ಮತ್ತು ದೇವರು ಕರುಣಿಸಿದ್ದ ಮನೆಗಳು, ಸಂಪತ್ತು ಸುರಕ್ಷಿತವಾಗಿದ್ದವು!

ಮಳೆ–ಗಾಳಿಯಿಂದ ಹಾನಿಗೊಳಗಾದವರ ನಿವಾಸಗಳನ್ನು ತುರ್ತಾಗಿ ಸರಿಪಡಿಸಬೇಕಿತ್ತು. ಧಣಿಗಳು ಕೂಲಿಕಾರರನ್ನು ಕೆಲಸಕ್ಕೆ ಕರೆದರು. ಆದರೆ ಅವರೆಲ್ಲ ವಿವಿಧ ಚಟುವಟಿಕೆಗಳಲ್ಲಿ ತೊಡಗಿದ್ದರು. ಕೆಲವರು ಪಕ್ವಾನ್ನ ಭೋಜನದಲ್ಲಿ ತೊಡಗಿದ್ದರು. ಕೆಲವರು ವಸ್ತ್ರ– ಒಡವೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು. ಕೆಲವರು ಕುಡಿತ–ಕುಣಿತ, ಮೋಜಿನಲ್ಲಿ